RA. 07/2022
ಪಿ.ಡಬ್ಲ್ಯೂ.1

ದಿನಾಂಕಃ 20-03-2024
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
ಪಾಟಿ ಸವಾಲುಃ ಎದುರುದಾರ ಪರ ವಕೀಲರಿಂದ ಃ

ಈ ಮೇಲ್ಮನವಿಯನ್ನು 4-5 ವರ್ಷಗಳ ಕಾಲ ವಿಳಂಬವಾಗಿ ಸಲ್ಲಿಸಿರುತ್ತೇನೆ. ದಾವೆಯಲ್ಲಿ ಯಾವ ತಾರೀಖಿನಂದು ತೀರ್ಪು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನಗೆ ಪಾರ್ಶವಾಯು 2017 ರಲ್ಲಿ ಆಗಿರುತ್ತದೆ. ಆದರೇ ನಿಖರವಾರದ ದಿನಾಂಕ ನನಗೆ ನೆನಪಿಲ್ಲ. ನನಗೆ ಪಾರ್ಶವಾಯು 2017 ರಿಂದ 2022 ರವರೆಗೆ ಇದಿತ್ತು. 2022 ರಲ್ಲಿ ಸ್ವಲ್ಪ ಗುಣಮುಖವಾಗಿರುತ್ತದೆ. ನಾನು ಪಾರ್ಶವಾಯು ಬಗ್ಗೆ ಗುರುಮಿಟ್ಕಲ್ ಅಲ್ಲಿ, ಯಾದಗಿರಿಯ ಡಾ. ರಾಜೇಂದ್ರ ಇವರ ಬಳಿ ಮತ್ತು ಇತರ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು ಚಿಕಿತ್ಸೆ ಪಡೆದುಕೊಂಡ ಬಗಗೆ ದಾಖಲೆಗಳು ನನ್ನ ಬಗ್ಗೆ ಇರುತ್ತವೆ.ನಾನು ವೈದ್ಯರ ಬಳಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ನನಗೆ ತಲೆಯಿಂದ ಕಾಲಿನವರೆಗೆ ಬಲಭಾಗದಲ್ಲಿ ಪಾರ್ಶುವಾಯು ಆಗಿತ್ತು. ನನಗೆ ಪಾರ್ಶವಾಯು ಆದ ನಂತರ ನಾನು ಮಲಗಿದ್ದಲ್ಲೆ ಮಲಗಿಕೊಂಡು ಇರುತ್ತಿದ್ದೆ. ನಾನು 1 ವರ್ಷದಿಂದ ಓಡಾಡಿಕೊಂಡಿರುತ್ತೇನೆ. ನನಗೆ ಪಾರ್ಶುವಾಯು ಆದ ನಂತರ ವಿಚಾರ ಶಕ್ತಿ ಸಂಪೂರ್ಣವಾಗಿ ಇರಲಿಲ್ಲ ಮತ್ತು ನನಗೆ ಸಂಪೂರ್ಣವಾಗಿ ಮಾತನಾಡಲು ಬರುತ್ತಿರಲಿಲ್ಲ. ನನಗೆ ಮೂವರು ಮಕ್ಕಳು ಇರುತ್ತಾರೆ. ಅವರಲ್ಲಿ ಒಬ್ಬಮಗ ಹೊರಗಿನ ದೇಶದಲ್ಲಿ ಹಾಗೂ ಇಬ್ಬರು ನಮ್ಮ ಬಳಿ ಇರುತ್ತಾರೆ. ನಾವು ನನಗೆ ಪಾರ್ಶುವಾಯು ಆಗುವುದಕಿಂದ ಮೊದಲು ಕೊರ್ಟ ಗೆ ಬರುತಿದ್ದೆ ಎಂದರೆ ಸರಿ. ನನಗೆ ಪಾರ್ಶುವಾಯು ಆದ ನಂತರ ನನ್ನ ಮಕ್ಕಳಿಗೆ ಆ ದಾವೆ ಬಗ್ಗೆ ಮಾಹಿತಿಪಡೆದುಕೊಳ್ಳುವಂತೆ ನಾನು ಹೇಳಿರುವುದಿಲ್ಲ. ನಿಪಿ.3 ರಲ್ಲಿ ಯಾವ ಅವಧಿಯಿಂದ ಯಾವ ಅವಧಿಯವರೆಗೆ ಪಾರ್ಶುವಾಯು ಗುಣಮುಖ ಆಗಿರಲಿಲ್ಲ ಎಂದು ನಮೂದಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ.3 ನ್ನು ಡಾ. ಭುಜಂಗ ರಾವ್ ಇವರ ಮಗಳೋ ಅಥವಾ ಸೊಸೆಯೋ ಕೊಟ್ಟಿರುತ್ತಾರೆ. ಸದರಿ ನಿಪಿ.3 ರನ್ನು ನನಗೆ ಪಾರ್ಶುವಾಯು ಆಗಿದ್ದಕ್ಕೆ Medicine ಕೊಟ್ಟ ಬಗ್ಗೆ ನೀಡಿರುತ್ತಾರೆ. ನಿಪಿ.3 ನ್ನು ನಾನು ಹೇಳುವ ಡಾ. ಭುಜಂಗ ರಾವ್ ಇವರ ಮಗಳೋ ಅಥವಾ ಸೊಸೆಯೋ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ನನಗೆ ಪಾರ್ಶುವಾಯು ಆಗಿರಲಿಲ್ಲ ಎಂದರೆ ಸರಿಯಲ್ಲ. ದಾವೆಯು ವಜಾಗೊಂಡಿರುವ ಕಾರಣ 5 ವರ್ಷಗಳರೆಗೆ ಸುಮ್ಮನೆ ಇದ್ದು ನಂತರ ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರ ಸರಿಯಲ್ಲ. ಈ ಮೇಲ್ಮನವಿಯನ್ನು ಸಲ್ಲಿಸಲು ಉಂಟಾದ ವಿಳಂಬವನ್ನು ಮನ್ನಾ ಮಾಡುವುದಕ್ಕಾಗಿ ನನಗೆ ಪಾರ್ಶುವಾಯು ಆಗಿತ್ತು ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.